Hunger Strike at Bijapura

ಶ್ರೀ ಕಾಗೋಡು ತಿಮ್ಮಪ್ಪ.—ಬಿಜಾಪುರದಲ್ಲಿ ಅನೇಕ ಜನ ನೇಕಾರರು ಉಪವಾಸಸತ್ಯಾಗ್ರಹ ಮಾಡುತ್ತಿದ್ದಾರೆಂದು ನಮಗೆ ಪದಿಗಳು ಬರುತ್ತಿವೆ ಮತ್ತು ಪತ್ರಿಕೆಗಳಲ್ಲೂ ಬಂದಿವೆ. ಮಾನ್ಯ ಮಂತ್ರಿಗಳಿಗೂ ಇದರ ವಿಚಾರ ಗೊತ್ತಿದೆ. ಆದುದರಿಂದ ಇದರ ಬಗ್ಗೆ ಒಂದು ಹೇಳಿಕೆಯನ್ನು ಮಾನ್ಯ ಮಂತ್ರಿಗಳು ಕೊಡಲು ತಾವು ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.—ಇದು ಈಗತಾನೇ ನನ್ನ ಕಡೆಗೆ ಬರುತ್ತಿದೆ. ಮುಂದೆ ನೋಡೋಣ.

Notice about cane charge on Students in Hubli

ಶ್ರೀ ಎ. ಎನ್. ಪಾಟೀಲ್.—ನಾವು ತಮ್ಮ ಕಡೆಗೆ 312ನೇ ಕಲಂ ಪ್ರಕಾರ ಗಮನ ಸೆಳೆಯುವ ನೂಚನೆ ಕೊಡಲಿಲ್ಲ. ಆದರೂ ಒಂದು ನೋಟೀಸನ್ನು ತಮ್ಮ ಕಡೆಗೆ ಕಳುಹಿಸಿದ್ದೇನೆ. ಅದು ಹುಬ್ಬಳ್ಳಿಯಲ್ಲಿ ವಿದ್ಯಾರ್ಥಿಗಳ ಮೇಲೆ ಕೇನ್ ಚಾರ್ಜು ಮಾಡಿರುವುದರ ಬಗ್ಗೆ ಇದೆ. ವಿದ್ಯಾರ್ಥಿಗಳು ಸರಕಾರಕ್ಕೆ ತಮ್ಮ ಬೇಡಿಕೆಗಳನ್ನು ಕೊಡಲು ಮೆರವಣಿಗೆಯಲ್ಲಿ ಬರುತ್ತಿದ್ದಾಗ ಪೋಲೀಸಿನವರು ಇಂತಹ ಚಿಕ್ಕ ಹುಡುಗರ ಮೇಲೆ ಕೇನ್ ಚಾರ್ಜು ಮಾಡಿ ಅವರ ಬೆನ್ನು ಮೇಲೆ ಗಾಯಗಳಾಗಿವೆ. ಪೋಲೀಸಿನವರು ಇಂತಹ ಮಕ್ಕಳ ಮೇಲೆ ಏಕೆ ಹೊಡೆಯುತ್ತಾರೆ ಇದರ ಬಗ್ಗೆ ಸರಕಾರದ ಕಡೆಯಿಂದ ಒಂದು ಸ್ಟೇಟುಮೆಂಟನ್ನು ಕೊಡಲು ತಮ್ಮ ಮೂಲಕ ಅರಿಕೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಇಂದು ಬೆಳಗ್ಗೆ ಇದರ ಸಂಬಂಧವಾದ ಕಾಲಿಂಗ್ ಅಟೆನ್‌ಷನ್ ನೋಟೀಸು ಬಂದಿದೆ. ಇದನ್ನು ಮಂತ್ರಿಗಳ ಕಡೆಗೆ ಕಳುಹಿಸಿಕೊಡುತ್ತೇನೆ.

ಶ್ರೀ ಎ. ಎನ್. ಪಾಟೀಲ್.—ಸಂಬಂಧಪಟ್ಟ ಶಿಕ್ಷಣ ಮಂತ್ರಿಗಳು ಇಲ್ಲಿರುವುದರಿಂದ ಅವರಿಗೆ ಇದರ ವಿಚಾರ ತಿಳಿದಿರಬಹುದು ಎಂದು ಇಂತಹ ಹುಡುಗರ ಕಷ್ಟವನ್ನು ಅವರ ಗಮನಕ್ಕೆ ಇಲ್ಲಿ ತರುತ್ತಿದ್ದೇನೆ.

Sri A. R. BADARINARAYANA (Minister for Education).—I have just now received the notice. I would like to have some time before I can reply.

Absence of the Minister for Labour

Sri C. M. ARUMUGAM (K.G.F.).—Regarding the absence of a Minister—the Labour Minister is absent. We have seen in the press that the Chief Minister has given instruction or advised that Ministers should not be absent from Bangalore when the House is in session. For the last two days, the Minister of Labour, Transport, Tourism, etc., is not here. They function collectively as a Cabinet. We want to know whether the Labour Minister is here and whether he is going to some, or will he continue to be a Minister!

Madam SPEAKER.—He might come now.

Sri M. S. KRISHNAN.—Somebody was saying that he has gone to Mecca. I do not know.

ಶ್ರೀ ಹೆಚ್. ಡಿ. ದೇವೇಗೌಡ.—ಮಂತ್ರಿಗಳು ಬೇರೆ ಎಲ್ಲಗಾದರೂ ಕೋಗಬೇಕಾದರೆ ಅವರು ಮೊದಲು ಸ್ಪೀಕರ್‌ರವರಿಗೆ ಬರೆದು ಅವರ ಅನುಮತಿ ಪಡೆದು ಹೋಗಬೇಕು. ಹಾಗೇನಾದರೂ ಇಲ್ಲಿ ಅಕ್ಷ್ಯಕ್ಷರಿಗೆ ಕಾಗದ ಬರೆದು ಅವರ ಅಪ್ಪಣೆ ಪಡಿದಿದ್ದಾರೆಯೇ ಅದನ್ನು ತಾವು ತಿಳಿಸಬೇಕು. ಇಲ್ಲವೇ ಅಧ್ಯಕ್ಷರು ಈ ಮಂತ್ರಿಗಳನ್ನು ಬೇರೆ ಎಲ್ಲಗಾದರೂ ಕಳುಹಿಸಿಕೊಟ್ಟಿದ್ದಾರೆಯೇ ಹೇಗೆ ಎಂಬುದನ್ನು ಅಧ್ಯಕ್ಷರು ಇಲ್ಲಿ ತಿಳಿಸಿದರೆ ಸಾಕು.